# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 106

ಸದಸ್ಯರ ಹೆಸರು : ಶ್ರೀ. ಮಧು.ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು.

ಉತ್ತರಿಸುವ ದಿನಾಂಕ : 05.12.2023

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿ ತೆಂಗು ಬೆಳೆಯ ಒಟ್ಟು ವಿಸ್ತೀರ್ಣ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ತೆಂಗು ಬೆಳೆಯ ಒಟ್ಟು ವಿಸ್ತೀರ್ಣ 69162 ಹೆಕ್ಟೇರ್ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ. | ತಾಲ್ಲೂಕು | ವಿಸ್ತೀರ್ಣ |
|---|---|---|
| 1 | ಕೆ.ಆರ್.ಪೇಟೆ | 21995 |
| 2 | ಮದ್ದೂರು | 6282 |
| 3 | ಮಳವಳ್ಳಿ | 3971 |
| 4 | ಮಂಡ್ಯ | 5303 |
| 5 | ನಾಗಮಂಗಲ | 24252 |
| 6 | ಪಾಂಡವಪುರ | 4533 |
| 7 | ಶ್ರೀರಂಗಪಟ್ಟಣ | 2826 |
| ಒಟ್ಟು | | 69162 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಕಪ್ಪು ತಲೆ ಹುಳು ಮತ್ತು ಬೆಂಕಿ ರೋಗಕ್ಕೆ ಎಷ್ಟು ಹೆಕ್ಟೇರ್ ಪ್ರದೇಶದ ತೆಂಗು ಬೆಳೆ ಹಾನಿ ಆಗಿದೆ: ಬೆಳೆ ನಷ್ಟ ಅಂದಾಜು ಮೌಲ್ಯ ಎಷ್ಟು; ರೈತರ ಜಮೀನುಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ: (ತಾಲ್ಲೂಕುವಾರು ವಿವರ ನೀಡುವುದು) | ಕಪ್ಪು ತಲೆ ಹುಳು ಬಾಧೆಯಿಂದ ಹಾನಿಗೊಳಗಾದ ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ. | ತಾಲ್ಲೂಕು | ಕಪ್ಪು ತಲೆ ಹುಳುವಿನ ಹಾನಿಗೊಳಗಾದ ವಿಸ್ತೀರ್ಣ (ಹೆ) | ಬೆಳೆ ನಷ್ಟದ ಅಂದಾಜು (ರೂ.ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|---|
| 1 | ಕೆ.ಆರ್.ಪೇಟೆ | 1181 | 330.68 | 1644 |
| 2 | ಮದ್ದೂರು | 1441 | 403.48 | 3115 |
| 3 | ಮಳವಳ್ಳಿ | 327 | 91.56 | 556 |
| 4 | ಮಂಡ್ಯ | 176 | 49.28 | 352 |
| 5 | ನಾಗಮಂಗಲ | 1139 | 318.92 | 2152 |
| 6 | ಪಾಂಡವಪುರ. | 248 | 69.44 | 275 |
| 7 | ಶ್ರೀರಂಗಪಟ್ಟಣ | 126 | 35.28 | 265 |
| ಒಟ್ಟು | | 4638 | 1298.64 | 8359 |

ಬೆಂಕಿ ರೋಗದಿಂದ ಹಾನಿಗೊಳಗಾದ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

| ಕ್ರ.ಸಂ. | ತಾಲ್ಲೂಕು | ಬೆಂಕಿ ರೋಗ ಹಾನಿಗೊಳಗಾದ ವಿಸ್ತೀರ್ಣ (ಹೆ) | ಬೆಳೆ ನಷ್ಟದ ಅಂದಾಜು (ರೂ.ಲಕ್ಷಗಳಲ್ಲಿ) | ಫಲಾನುಭವಿಗಳ ಸಂಖ್ಯೆ |
|---|---|---|---|---|
| 1 | ಕೆ.ಆರ್.ಪೇಟೆ | 0 | 0 | 0 |
| 2 | ಮದ್ದೂರು | 0 | 0 | 0 |
| 3 | ಮಳವಳ್ಳಿ | 150 | 42.00 | 220 |
| 4 | ಮಂಡ್ಯ | 0 | 0 | 0 |
| 5 | ನಾಗಮಂಗಲ | 0 | 0 | 0 |
| 6 | ಪಾಂಡವಪುರ | 0 | 0 | 0 |
| 7 | ಶ್ರೀರಂಗಪಟ್ಟಣ | 0 | 0 | 0 |
| | ಒಟ್ಟು | 150 | 42.00 | 220 |

| | | |
|---|---|---|
| ಇ) | ತೆಂಗು ಬೆಳೆ ನಷ್ಟ ಪರಿಹಾರಕ್ಕಾಗಿ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ: ಹಾಗಿದ್ದಲ್ಲಿ ಈ ಬಗ್ಗೆ ಸಂಪೂರ್ಣ ವಿವರ ನೀಡುವುದು: | ಸಲ್ಲಿಸಲಾಗಿದೆ.<br>ಹವಾಮಾನ ವೈಪರೀತ್ಯಯಿಂದಾಗಿ ಹೆಚ್ಚಿನ ಉಷ್ಣಾಂಶ ಮತ್ತು ಮಳೆ ಕೊರತೆಯಿಂದ ಅನಾವೃಷ್ಠಿಯಿಂದಾಗಿ ತೆಂಗು ಬೆಳೆಯಲ್ಲಿ ಕಪ್ಪು ತಲೆ ಹುಳುವಿನ ಬಾಧೆಯಿಂದ 28850 ಹೆಕ್ಟೇರ್ ಪ್ರದೇಶವು ಹಾನಿಯಾಗಿದ್ದು, NDRF/SDRF ಮಾರ್ಗಸೂಚಿಯನ್ವಯ ಬಹುವಾರ್ಷಿಕ ಬೆಳೆಗಳಿಗೆ ಪರಿಹಾರದಡಿ ರೂ.28,000/- ನಂತೆ ಪ್ರತಿ ಹೆಕ್ಟೇರ್‌ಗೆ ಪರಿಹಾರ ನೀಡುವಂತೆ ಕಂದಾಯ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. |
| ಈ) | ತೋಟಗಾರಿಕೆ ಇಲಾಖೆ ರೋಗ ನಿಯಂತ್ರಣಕ್ಕೆ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ: ಸದರಿ ರೋಗಗಳನ್ನು ಹೊರತುಪಡಿಸಿ ಬೇರೆ ಯಾವುದಾದರೂ ರೋಗಗಳು ತೆಂಗು ಬೆಳೆಯನ್ನು ಬಾಧಿಸಿವೆಯೇ? (ವಿವರ ನೀಡುವುದು) | ಸದರಿ ರೋಗಗಳನ್ನು ಹೊರತುಪಡಿಸಿ ತೆಂಗಿನ ಬೆಳೆಗೆ ರಸಸೋರುವ ರೋಗ ಹಾಗೂ ಅಣಬೆ ರೋಗಗಳು ಭಾಗಗಳ ತೆಂಗಿನ ತೋಟದಲ್ಲಿ ಭಾದಿಸುತಿವೆ.<br>ಕೀಟ ಮತ್ತು ರೋಗಗಳನ್ನು ನಿಯಂತ್ರಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1) ಕಪ್ಪುತಲೆ ಹುಳು ಭಾದಿತ ತೋಟಗಳಿಗೆ ಗೋನಿಯೋಜಸ್ ಪರೋಪ ಜೀವಿಗಳನ್ನು ಉಚಿತವಾಗಿ ಬಿಡುಗಡೆ ಮಾಡಲಾಗುತ್ತಿದೆ.<br>2) ಸಮಗ್ರ ಪೋಷಕಾಂಶ ನಿರ್ವಹಣೆ ಕುರಿತು ಮಾಹಿತಿ ನೀಡಲಾಗುತ್ತಿದೆ ಹಾಗೂ ರೈತರಿಗೆ ತರಬೇತಿ ಮತ್ತು ಜಾಗೃತಿ ನೀಡಲಾಗುತ್ತಿದೆ.<br>3) ತೆಂಗು ಮರುನಾಟಿ ಮತ್ತು ಪುನಶ್ಚೇತನ ಕಾರ್ಯಕ್ರಮದಡಿ ಪ್ರತಿ ಹೇಕ್ಟರ್ ರೂ.44750/- ಸಹಾಯಧನ ಮೊದಲನೇಯ ವರ್ಷ ಮತ್ತು ರೂ.8750/-ಎರಡನೇಯ ವರ್ಷಕ್ಕೆ ನೀಡಲಾಗುತಿದೆ.<br>4) ರೈತರ ತಾಕುಗಳಲ್ಲಿ ಹೊಸ ಪ್ರಾತ್ಯಕ್ಷಿತೆ ನಿರ್ಮಾಣ ಕಾರ್ಯಕ್ರಮದಡಿ ಪ್ರತಿ ಹೇಕ್ಟರ್ ರೂ.17500/- ಸಹಾಯಧನ ಮೊದಲನೇಯ ವರ್ಷ ಮತ್ತು ರೂ.17500/- ಎರಡನೇಯ ವರ್ಷಕ್ಕೆ ನೀಡಲಾಗುತ್ತಿದೆ. |

| | |
|---|---|
| | 5) ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರಿಗೆ ಶೇ.90ರಷ್ಟು ಹಾಗೂ ಇತರೆ ವರ್ಗದವರಿಗೆ ಶೇ.75ರಷ್ಟು ಸಹಾಯದನ 2 ಹೇಕ್ಟರ್ ವರೆಗೆ ಮತ್ತು 2 ರಿಂದ 5 ಹೇಕ್ಟರ್ ಶೇ.45 ಸಹಾಯದನ ನೀಡಲಾಗುತ್ತಿದೆ. |

HORTI 422 HGM 2023

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು